## ನಟನಾ ಕೌಶಲ್ಯದ ನಾಶ

'ಡ್ರಾಮಾ ಜ್ಯೂನಿಯರ್ಸ್'ನಲ್ಲಿ ಹೆಸರು ಗಳಿಸಿದ ಬಾಲನಟಿ ಚಿತ್ರಾಲಿ ವಾರಕ್ಕೊಂದು ವಿವಿಧ ವೇಷ– ಭೂಷಣ ಧರಿಸಿ ಸಹಜವಾದ ನಟನೆಯಿಂದ ಕನ್ನಡ ಟಿವಿ ವೀಕ್ಷಕರಿಗೆ ತನ್ನ ಪ್ರತಿಭಾ ಕೌಶಲ್ಯವನ್ನು ತೋರಿಸುತ್ತಿದ್ದಳು. ಆಕೆ ಅವಳ ಅಭಿನಯದಿಂದಲೇ ಜನಮನವನ್ನೂ ಗೆದ್ದಿದ್ದಳು. 'ವಾರಸ್ದಾರ' ಧಾರಾವಾಹಿಯಲ್ಲಿ ಹುಡುಗನ ಪಾತ್ರವನ್ನು ಕೊಟ್ಟು ಗೋಣು ಆಡಿಸುವ ಪೆದ್ದು ಬೊಂಬೆಯಂತೆ ತೋರಿಸುತ್ತಾ, ಅವಳಲ್ಲಿರುವ ವಿವಿಧ ನಟನಾ ಚತುರತೆಯನ್ನು ಸರ್ವನಾಶ ಮಾಡುತ್ತಿದೆ ವಾರಸ್ದಾರ ತಂಡ.

—ಲಲಿತಾ ಅಂಬಾಗಿಲು, ಉಪ್ಪುಂದ

## ಜಯಂತಿಯವರನ್ನು ಪರಿಚಯಿಸಿ

ಮುಗಿಸಬಹುದಾದ ಧಾರಾವಾಹಿಗಳು ಅಂತ್ಯ ಕಾಣದೆ ಮುಂದುವರಿಯುತ್ತ ಬೋರ್ ಹೊಡೆಸುವ ಸಂದರ್ಭದಲ್ಲಿ 'ವೀಕ್ ಎಂಡ್ ವಿತ್ ರಮೇಶ್' ಚೇತೋಹಾರಿಯಾಗಿ ಮೂಡಿ ಬರುತ್ತಿದೆ. ಸಾಧಕರ ಸೀಟ್‌ನಲ್ಲಿ ಕುಳಿತು ತಮ್ಮ ಬದುಕಿನ ಏಳು–ಬೀಳುಗಳ ನಡುವೆ ತಮ್ಮ ಸಾಧನೆಯ ಹಾದಿಯ ಬಗೆಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ರೀತಿ ಆತ್ಮೀಯವೆನಿಸಿದೆ.

ಜಗ್ಗೇಶ್, ಅರ್ಜುನ್ ಜನ್ಯ ಅವರು ತಾವು ಅನುಭವಿಸಿದ ನೋವಿನ, ಅವಮಾನದ ಪ್ರಸಂಗಗಳನ್ನು ಹೇಳಿಕೊಂಡಾಗ ಕಣ್ಣಾಲಿಗಳು ತುಂಬಿ ಬಂದವು. ಪರಿಶ್ರಮ, ತಾಳ್ಮೆ, ಸಾಧಿಸಬೇಕು ಎಂಬ ಛಲವಿದ್ದಲ್ಲಿ ಗೆಲುವು ಖಂಡಿತ ಎಂಬುದು ಅವರ ಸಾಧನೆಯಿಂದ ವ್ಯಕ್ತವಾಗುತ್ತದೆ. ಈ ಸಾಲಿನಲ್ಲಿ ಕೆ.ಕಲ್ಯಾಣ್, ವಿ.ಮನೋಹರ್, ಜಯಂತಿ ಅವರ ಪರಿಚಯವೂ ಬರಲಿ.

—ವಿಭಾ ಮುರಳೀಧರ್, ತುಮಕೂರು

## ಬೆಳ್ಳಿ ಪರದೆ

ಸರಳ ಜೀವನದಲ್ಲಿ ಬೆಳ್ಳಿ ಪರದೆ ಬರುತ್ತಿದೆ. ಪ್ರಖ್ಯಾತ ನಟನಟಿಯರು ನಡೆದು ಬಂದ ದಾರಿ, ಏಳು ಬೀಳು, ದುಃಖ ದುಮ್ಮಾನ, ಹವ್ಯಾಸ ದುಃಶ್ಚಟ, ನಟ ನಟಿಯರ ಸಂಬಂಧ, ರೀಲ್ ಲೈಫ್, ರಿಯಲ್ ಲೈಫ್, ರಾಜಕೀಯ , ಸಂಸಾರ ಏಳುಬೀಳು, ಮಡದಿ ಮಕ್ಕಳು, ಕಪ್ಪು ಬಿಳುಪಿನ ಕಾಲದಿಂದ ಇದುವರೆಗೆ ನಟಿಸಿದ ಚಿತ್ರಗಳು, ಬಾಕ್ಸ್ ಆಫೀಸ್ ಹಿಟ್, ಟರ್ನಿಂಗ್ ಪಾಯಿಂಟ್, ಹಾಡುಗಳು, ಅಭಿನಯ, ಸ್ಟುಡಿಯೋ ನಿರ್ಮಾಣ, ನಿರ್ದೇಶನ, ನಿರ್ಮಾಣ, ಪ್ರಶಸ್ತಿಗಳು, ಕಂಡು ಕೇಳರಿಯದ ಹಾಡುಗಳು, ವೈಭವದ ದೃಶ್ಯಗಳು, ಗತವೈಭವ, ನೋಟ, ಕಹಿಸತ್ಯ ಅಂತ್ಯಗೊಂಡ ಪರಿಯನ್ನು 2–3 ಕಂತುಗಳಲ್ಲಿ ಕಣ್ಣಿಗೆ ಎಳೆ ಎಳೆಯಾಗಿ ಕಟ್ಟಿಕೊಡಲಾಗುತ್ತಿದೆ. ಇದು ತೆರೆಯ ಹಿಂದಿನ ಪರಪಂಚ. ವಿವಿಧ ವೃತ್ತಿಗಳಲ್ಲಿ ತೊಡಗಿರುವವರ ಏಳುಬೀಳುಗಳು ಪ್ರತಿ ಭಾನುವಾರ ತಿಳಿದುಕೊಂಡಂತಾಗುತ್ತಿದೆ. ವೈಡ್ ಆ್ಯಂಗಲ್ ವಿಸ್ಮಯಕಾರಿ ಸಂಗತಿಗಳನ್ನು ತಿಳಿಸುತ್ತಿದೆ.

—ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ

**ವಾರದ ಪತ್ರ**

## ಹೀರೋಗೊಂದು ಸಲಾಂ

ಬಹಳ ದಿನಗಳಿಂದ ಪಬ್ಲಿಕ್ ಟಿವಿ ನೋಡುತ್ತಿದ್ದೇನೆ. ಅಸಾಮಾನ್ಯ ಸಾಧಕರನ್ನು ಪರಿಚಯಿಸುತ್ತಿದ್ದಾರೆ. ಎಲ್ಲೋ ಯಾವುದೋ ಹಳ್ಳಿಯ ಮೂಲೆಯಲ್ಲೆಲ್ಲೋ ಇರುವ ಶ್ರೀಸಾಮಾನ್ಯರನ್ನು ಗುರುತಿಸಿ ಅವರನ್ನು 'ಪಬ್ಲಿಕ್ ಹೀರೋ' ಮಾಡುವ ಅವರ ಪ್ರಯತ್ನ ಶ್ಲಾಘನೀಯ. ಇಂಥದೇ ಅರವಿಂದ್ ರಮೇಶ್ ನಡೆಸಿಕೊಡುವ 'ವೀಕ್ ಎಂಡ್ ವಿತ್ ರಮೇಶ್' ಕಾರ್ಯಕ್ರಮದಲ್ಲಿ ಪ್ರಾರಂಭಿಕ ಹಂತದಲ್ಲಿ ಕಂಡು ಬಂದಿತು. ಆದರೆ ನಂತರ ಆ ಪ್ರಯತ್ನ ಬಿಟ್ಟೇ ಬಿಟ್ಟರು. ಕಲಾವಿದರು ಅನೇಕರು ಪ್ರತಿಭಾನ್ವಿತ ಸಂಪನ್ನರು. ಅವರೂ ನಮಗೆ ಬೇಕಾದವರೇ ನಡು ನಡುವೆ ಯಾವುದೇ ಬಿರುದು ಬಾವಲಿಗಳಿಗೆ ಆಸೆ ಪಡದೆ ತಮ್ಮ ಪಾಡಿಗೆ ತಾವು ನಿಜವಾದ ಅರ್ಥದಲ್ಲಿ ಸಮಾಜ ಸೇವೆ ಮಾಡುತ್ತಿರುವ ಸಾಮಾನ್ಯರನ್ನು ಖುರ್ಚಿಯಲ್ಲಿ ಕೂಡಿಸಿ ಮಾನ್ಯತೆ ನೀಡಿ, ಮಾನ್ಯರಾಗಿ.

—ಎಲ್. ಗಿರಿಜಾ ರಾಜ್, ಬೆಂಗಳೂರು

## ಲವಲವಿಕೆಯ ಶರ್ಮಿಳಾ

ಝೀ ವಾಹಿನಿಯಲ್ಲಿ ಈಗ ಹೊಸದಾಗಿ ಪ್ರಸಾರವಾಗುತ್ತಿರುವ 'ಪತ್ತೇದಾರಿ ಪ್ರತಿಭಾ' ಧಾರಾವಾಹಿಯ ಪತ್ತೆದಾರಿಣಿ ಪಾತ್ರದಲ್ಲಿ ಅಭಿನಯಿಸುವ ಶರ್ಮಿಳಾ ಅವರು ಲವಲವಿಕೆ, ಸಹಜತೆಯ ನಗುಮೊಗದ ಮುಖಭಾವದಿಂದ ಗಮನ ಸೆಳೆಯುತ್ತಾರೆ.

ಒಂದು ಪ್ರಸಂಗದಲ್ಲಿನ ತಪ್ಪಿತಸ್ಥರನ್ನು ಪತ್ತೆಮಾಡುವ ಕ್ರಮ ಚೆನ್ನಾಗಿದ್ದು ಸ್ವಲ್ಪವೂ ಎಳೆಯದಂತೆ ಚುರುಕಾಗಿದ್ದರೆ ಧಾರಾವಾಹಿ ಮತ್ತಷ್ಟು ಯಶಸ್ವಿ ಆಗುತ್ತದೆ. ನಿರ್ದೇಶಕ ನವೀನ್ ಕೃಷ್ಣ ನಿರ್ದೇಶನದಲ್ಲಿ ಯಶಸ್ಸು ಕಾಣಲಿ.

—ಗೀತಾ ಶ್ರೀನಾಥ್, ತುಮಕೂರು

## ಅಗ್ನಿಸಾಕ್ಷಿಗೆ ಕೊನೆ ಇಲ್ಲವೆ?

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಅಗ್ನಿಸಾಕ್ಷಿ'ಗೆ ಮುಕ್ತಿ ಎಂದು ಸಿಗುತ್ತದೆ. ಇದಕ್ಕೆ ಚಂದ್ರಿಕಾಳ ಪಾತ್ರಕ್ಕೆ ಸಂಭಾಷಣೆ ಬರೆಯುತ್ತಿರುವ ಸಂಭಾಷಣೆಕಾರ ಮೊದಲು ಕಾರಣನಾಗುತ್ತಾನೆ ಎಂದರೆ ತಪ್ಪಲ್ಲ. ಚಂದ್ರಿಕಾಳ ತಪ್ಪುಗಳನ್ನು ವೀಕ್ಷಕ ಸಹಿಸಿಕೊಂಡಿದ್ದಾನೆ. ಇಂದು ಕೊನೆಯಾಗುತ್ತದೆ. ನಾಳೆ ಕೊನೆಯಾಗುತ್ತದೆ ಎಂದು ಕಾದು ಕಾದು ಸಾಕಾಯಿತು. ಹುಟ್ಟಿಗೆ ಸಾವು ಖಚಿತ. ಆದರೆ ಅಗ್ನಿಸಾಕ್ಷಿಗೆ?

—ಎನ್.ಎಸ್.ಚಂದ್ರಶೇಖರ್ ಬೆಂಗಳೂರು, ಉಷಾ ಸೋಗಲ್, ತುರಹಳ್ಳಿ

## ಡಾಕ್ಟರ್‌ಗೆ ಜ್ಞಾನವಿಲ್ಲವೆ?

ಕಲರ್ಸ್ ಟಿವಿಯ ಜನಪ್ರಿಯ ಧಾರಾವಾಹಿ ಪುಟ್ಟ ಗೌರಿಯನ್ನು ಅನಾವಶ್ಯಕವಾಗಿ ಮುಂದುವರಿಸಲಾಗಿದೆ. ಕ್ಯಾನ್ಸರ್ ಪೀಡಿತ ಗೌರಿ ತಾನು ಸತ್ತಂತೆ ನಟಿಸುತ್ತಾಳೆ. ಆಗ ಅಲ್ಲಿಗೆ ಬಂದ ಅವಳ ಗಂಡ ಮಹೇಶ, ಎಂಬಿಬಿಎಸ್ ಡಾಕ್ಟರ್ ಅವಳು ನಿಜವಾಗಿಯೂ ಸತ್ತಿರುವಳೆಂದು ತಿಳಿದು ಅವಳಿದ್ದ ರೂಮಿನ ಚಿಲಕ ಹಾಕಿಕೊಂಡು ತಾನೂ ಫ್ಯಾನಿಗೆ ನೇಣು ಹಾಕಿಕೊಂಡು ಸಾಯಲು ಯತ್ನಿಸುವನು. ಹೊರಗೆ ಕಿಟಕಿಯಿಂದ ಈ ದೃಶ್ಯ ಕಂಡ ಮಹೇಶನ ಮನೆಯವರು ಕೆಲಸದವನ ಸಹಾಯದಿಂದ ಬಾಗಿಲು ತೆಗೆಸಿ ಮಹೇಶನನ್ನು ಬದುಕಿಸುತ್ತಾರೆ. ಅಷ್ಟರಲ್ಲಿ ಗೌರಿಯೂ ಎದ್ದು ಕೂಡುವಳು. ಆದರೆ ನನ್ನ ಪ್ರಶ್ನೆಯೆಂದರೆ ಒಬ್ಬ ಡಾಕ್ಟರ್‌ಗೆ ಒಬ್ಬ ವ್ಯಕ್ತಿ ಸತ್ತಿರುವನೋ ಇಲ್ಲವೋ ಎಂಬ ಸಾಮಾನ್ಯ ಪರೀಕ್ಷೆಯೂ ಗೊತ್ತಾಗುವುದಿಲ್ಲವೆ? ಮಹೇಶನಿಗೆ ಗೌರಿ ನಿಜವಾಗಿಯೂ ಜೀವಂತ ಇರುವಳೋ ಅಥವಾ ಸತ್ತಿರುವಳೋ ಎಂಬುದನ್ನು ಪರೀಕ್ಷಿಸಲು ಏಕೆ ಆಗಲಿಲ್ಲ. ಪಾಪ! ನಿರ್ದೇಶಕರೂ ಮಹೇಶ ಎಂಬಿಬಿಎಸ್ ಮಾಡಿರುವುದನ್ನು ಮರೆತರೋ ಹೇಗೆ?

—ವಸಂತರಾವ್ ಕೊರತಿ, ಬೆಂಗಳೂರು

## ಇವು ಸಂದೇಶಗಳು

ಅದೊಂದು ಧಾರಾವಾಹಿ. ಅದರಲ್ಲಿ ಹುಡುಗನ ಒಪ್ಪಿಗೆ ಇಲ್ಲದೇ, ಹುಡುಗನ ತಾತ ಮತ್ತು ಹುಡುಗಿಯ ತಂದೆ ಮದುವೆಯನ್ನು ನಿಶ್ಚಯಿಸಿ ಹೂವು ಹಣ್ಣು ಬದಲಾಯಿಸಿಕೊಳ್ಳುತ್ತಾರೆ. ಈ ದೇಶದಲ್ಲಿ ಧರ್ಮ ಜಾತಿ, ಮತ ಮತ್ತು ಪಂಥಗಳು ಯಾವುದೇ ಇರಲಿ ಮದುವೆಯಾಗುವವರ ಮತ್ತು ಅವರ ತಂದೆ ತಾಯಿಗಳ ಮನಸ್ಸಿಗೆ ಒಪ್ಪಿಗೆ ಇಲ್ಲದೇ ಮದುವೆ ಕಾರ್ಯ ಮುಂದುವರೆಯುವ ಸಂದರ್ಭವೇ ಇರದಿರುವಾಗ, ಈ ಧಾರಾವಾಹಿ ನೀಡುವ ಸಂದೇಶ ವ್ಯತಿರಿಕ್ತವಲ್ಲವೇ?

ಇನ್ನೊಂದು ಧಾರಾವಾಹಿಯಲ್ಲಿ ಮನೆಯೊಡತಿಯು, 'ಎಲ್ಲರಿಗೂ ಕಾದು ಒಟ್ಟಿಗೆ ಊಟ ಮಾಡಲು ಸಾಧ್ಯವಿಲ್ಲ... ಊಟವನ್ನು ಅವರವರ ಕೋಣೆಗೆ ಅಡಿಗೆಯವನ ಜೊತೆ ಕಳಿಸುತ್ತೇವೆ' ಎನ್ನುತ್ತಾಳೆ. ಭಾರತೀಯ ಸಂಸ್ಕೃತಿಯಲ್ಲಿ, ಎಲ್ಲರೂ ಕೆಲಸಕ್ಕೆ ಹೊರ ಹೋಗುವ ದಿನಗಳಲ್ಲಿ, ಕನಿಷ್ಠ ರಾತ್ರಿಯ ಊಟವನ್ನಾದರೂ ಮನೆ ಮಂದಿ ಎಲ್ಲಾ ಒಟ್ಟಿಗೆ ಕುಳಿತು ತಮಾಷೆಯಾಗಿ ಮಾತನಾಡುತ್ತಾ ಟಿವಿ ನೋಡುತ್ತಾ ಮಾಡುವುದು ಪದ್ಧತಿ.

—ರಮಾನಂದ ಶರ್ಮಾ, ಬೆಂಗಳೂರು